ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಯವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಈ ಮೊದಲು ವಿಶ್ವಬ್ಯಾಂಕ್ ಶೇಕಡ 72ರಷ್ಟು ಹಣಕಾಸಿನ ನೆರವು ಕೊಟ್ಟರೆ ರಾಜ್ಯ ಸರ್ಕಾರ ಶೇಕಡ 28ರಷ್ಟು ಕೊಡಬೇಕಾಗಿತ್ತು. ಆದರೆ, ಈಗ ವಿಶ್ವಬ್ಯಾಂಕ್ ಶೇಕಡ 80ರಷ್ಟು ಹಣಕಾಸಿನ ನೆರವು ಒದಗಿಸಿದರೆ, ರಾಜ್ಯ ಸರ್ಕಾರದ ಪಾಲು ಶೇಕಡ 20ರಷ್ಟಿರುತ್ತದೆ. ಇದಕ್ಕೆ ಕೇಂದ್ರ ಸರ್ಕಾರದ ವಿತ್ತ ಸಚಿವರ ಒಪ್ಪಿಗೆ ಬೇಕಾಗುತ್ತದೆ. ಅವರ ಒಪ್ಪಿಗೆ ಪಡೆದುಕೊಂಡೇ ಇವೊತ್ತು ರಾಜ್ಯ ಸರ್ಕಾರ ಸುಮಾರು 2,300 ಕೋಟಿ ರೂಪಾಯಿಗಳ ಸಾಲ ಪಡೆದಿದೆ. ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು ನಾವು ಯಾವ ರೀತಿ ನಿರ್ವಹಿಸುತ್ತಿದ್ದೇವೋ ಅದೇ ರೀತಿ ಜಿಲ್ಲಾ ಪ್ರಮುಖ ರಸ್ತೆಗಳನ್ನೂ ಸಹ ನಿರ್ವಹಿಸುವ ದಿಕ್ಕಿನಲ್ಲಿ ಸರ್ಕಾರ ಆಲೋಚಿಸುತ್ತಿದೆ.

ಶ್ರೀ ಹೆಚ್.ಡಿ.ಬಸವರಾಜು: ರಾಜ್ಯದಲ್ಲಿರುವ ಅನೇಕ ಜಿಲ್ಲಾ ಪ್ರಮುಖ ರಸ್ತೆಗಳು ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಗೊಳಪಡುವ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣಗೊಳಿಸಿ ಎರಡು ವರ್ಷಗಳವರೆಗೆ ಇಲಾಖೆಯವರು ನಿರ್ವಹಿಸುತ್ತಾರೆ. ತದನಂತರ, ಆ ರಸ್ತೆಗಳ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆಯಾಗಲೀ ಜಿಲ್ಲಾ ಪರಿಷತ್‌ನವರಾಗಲೀ ನಿರ್ವಹಿಸುವುದಿಲ್ಲವಾದ್ದರಿಂದ ರಸ್ತೆಗಳ ಸ್ಥಿತಿಯಂತೂ ಶೋಚನೀಯವಾಗಿರುತ್ತದೆ. ಎರಡು ವರ್ಷಗಳಾದ ನಂತರ ರಸ್ತೆಗಳ ನಿರ್ವಹಣಾ ಕಾರ್ಯವನ್ನು ಯಾರು ವಹಿಸಿಕೊಳ್ಳಬೇಕು? ಸರ್ಕಾರ ಇದರ ಬಗ್ಗೆ ಯಾವ ನೀತಿ ಅಳವಡಿಸಿಕೊಂಡಿದೆ? ಎಂಬುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್: ನಾನು ಈಗಾಗಲೇ ಮಾನ್ಯ ಸದಸ್ಯರಿಗೆ ತಿಳಿಸಿರುವಂತೆ ಇದು ನಬಾರ್ಡ್-5 ಮತ್ತು 6 ರಲ್ಲಿ ಮಂಜೂರಾಗಿದ್ದು, ಏಜೆನ್ಸಿಯನ್ನು ಸಹ ನಿಗದಿಗೊಳಿಸಲಾಗಿದೆ. ನಬಾರ್ಡ್-7ರ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿ ಮುಂದಿದ್ದು, ಅದರ ಬಗ್ಗೆಯೂ ನಾವು ವಿಚಾರ ಮಾಡುತ್ತಿದ್ದೇವೆ. ಎರಡನೆಯದಾಗಿ, ನಬಾರ್ಡ್ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಯ ನಿರ್ವಹಣೆ ಕುರಿತಂತೆ ಸರ್ಕಾರ ಆ ಕುರಿತು ಅತಿ ಶೀಘ್ರವಾಗಿ ನಿರ್ಣಯ ಕೈಗೊಳ್ಳುತ್ತದೆ.

ಬೀರೂರು ಪ್ರವಾಸಿ ಮಂದಿರದಲ್ಲಿ ಸಾಕಷ್ಟು ಕೊಠಡಿಗಳು ಇಲ್ಲದಿರುವುದು.

178(1967)

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀರೂರು ಪ್ರವಾಸ ಮಂದಿರದಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು, ಈ

ಕೊಠಡಿಗಳು ತನಿಖಾಧಿಕಾರಿ ಹಾಗೂ ಪ್ರವಾಸಕ್ಕಾಗಿ ಬರುವ ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸಾಕಾಗುತ್ತಿದೆಯೆ?

ಆ) ಸಾಕಾಗದಿದ್ದಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವುದಕ್ಕಾಗಿ ಯೋಜನೆಯನ್ನು ತಯಾರಿಸಲಾಗಿದೆಯೇ; ತಯಾರಿಸಿದ್ದಲ್ಲಿ ಅಂದಾಜು ಎಷ್ಟು?

ಇ) ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಆ) ಬೀರೂರು ಪ್ರವಾಸಿ ಮಂದಿರದಲ್ಲಿ ಪ್ರಸ್ತುತ 3 ಕೊಠಡಿಗಳು ಇರುತ್ತವೆ. ಈ ಕೊಠಡಿಗಳು ತನಿಖಾಧಿಕಾರಿ ಹಾಗೂ ಪ್ರವಾಸಕ್ಕಾಗಿ ಬರುವ ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸಾಕಾಗುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಇದೇ ಪ್ರಶ್ನೆಯನ್ನು ಕಳೆದ ಎರಡು ವರ್ಷಗಳ ಹಿಂದೆ ಹಿಂದಿನ ಶಾಸಕರು ಕೇಳಿದ್ದರು. ಇದಕ್ಕುತ್ತರವಾಗಿ ಮುಂದಿನ ವರ್ಷಗಳಲ್ಲಿ ಪ್ರವಾಸಿ ಮಂದಿರದಲ್ಲಿ ಕೊಠಡಿಗಳನ್ನು ಕಟ್ಟಿಸಿಕೊಡಲಾಗುವುದೆಂಬ ಮಾತನ್ನು ಆಗ ಸದನದಲ್ಲಿ ಹೇಳಿದ್ದರು. ಈ ನಿಟ್ಟಿನಲ್ಲಿ ಆಗಿರುವ ಒಂದು ಬೆಳವಣಿಗೆ ಏನೆಂದರೆ, ಹೊಸ ಕಟ್ಟಡದ ನಿರ್ಮಾಣಕ್ಕಾಗಿ ಯೋಜನೆಯನ್ನು ಇನ್ನೂ ತಯಾರಿಸಿರುವುದಿಲ್ಲ. ಬೀರೂರು ಪ್ರವಾಸಿ ಮಂದಿರದಲ್ಲಿ ಪ್ರಸ್ತುತ ಇರುವುದು ಮೂರು ಕೊಠಡಿಗಳು, ಈ ಪೈಕಿ ಎರಡು ಕೊಠಡಿಗಳನ್ನು ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ನಿರ್ಮಿಸಿದ್ದರೆ, ಮತ್ತೊಂದು ಕೊಠಡಿಯನ್ನು ತದನಂತರ ನಿರ್ಮಿಸಲಾಗಿರುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ನಿರ್ಮಿಸಿರುವ ಕೊಠಡಿಗಳು ಹಾಳಾಗಿದ್ದು, ತದನಂತರ ನಿರ್ಮಿಸಿರುವ ಒಂದು ಕೊಠಡಿ ಬೀಳುವ ಸ್ಥಿತಿಯಲ್ಲಿದೆ. ಸದರಿ ಕೊಠಡಿಯೊಳಗೆ ಸಾರ್ವಜನಿಕರಾಗಲೀ ಅಥವಾ ಇತರೆ ಅಲ್ಲಿಗೆ ವಾಸ್ತವ್ಯಕ್ಕಾಗಿ ಬರುವ ಯಾವುದೇ ಅಧಿಕಾರಿಗಳು ಸಹ ಒಳಗಡೆ ಹೋಗುವ ಸ್ಥಿತಿಯಲ್ಲಿಲ್ಲ. ಆದುದರಿಂದ, ತಾವುಗಳು ದಯಮಾಡಿ ಇದನ್ನು ಪುನರ್ ಪರಿಶೀಲಿಸುವ ಮೂಲಕ ಪ್ರಸ್ತಾವವನ್ನು ಪರಿಗಣಿಸಿ ಈ ವರ್ಷವೇ ಕೊಠಡಿಗಳಿಗಾಗಿ ಹೊಸ ಕಟ್ಟಡ ನಿರ್ಮಿಸಿಕೊಡುತ್ತೇವೆಂಬ ಮಾತನ್ನು ತಾವು ಹೇಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್: ಬೀರೂರು ಪ್ರವಾಸಿ ಮಂದಿರದಲ್ಲಿ ಕೊಠಡಿಗಳ ಅವಶ್ಯಕತೆ

ಇರುವುದರಿಂದ ಆ ಬಗ್ಗೆ ಸರ್ಕಾರ ಗಮನಹರಿಸಿ ಹೊಸ ಕಟ್ಟಡ ಕಟ್ಟುವ ಕುರಿತು ಯೋಜನೆ ಕೈಗೊಳ್ಳಲು ಪ್ರಾರಂಭಿಸುತ್ತೇವೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಧನ್ಯವಾದಗಳು. ದಯವಿಟ್ಟು ತಾವು ನನ್ನ ಒಂದು ಮನವಿಯನ್ನು ಪುರಸ್ಕರಿಸಬೇಕು. ಏನೆಂದರೆ, ಬೀರೂರು ಪ್ರವಾಸಿ ಮಂದಿರದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಒಂದು ರಾತ್ರಿ ವಾಸ್ತವ್ಯ ಹೂಡಿದಲ್ಲಿ ರಾತ್ರೋರಾತ್ರಿ ಆ ಪ್ರವಾಸಿ ಮಂದಿರದ ಕಟ್ಟಡ ಮರಸ್ಥಿಗೊಂಡು ವಾಸ್ತವ್ಯ ಹೂಡಲು ಅನುಕೂಲವಾಗುತ್ತದೆ! ಆದುದರಿಂದ, ಒಂದು ರಾತ್ರಿ ಸದರಿ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಹೂಡಬೇಕೆಂದು ಕೇಳಿಕೊಳ್ಳುತ್ತೇನೆ.

ಧರ್ಮಸಿಂಗ್: ನಾನು ಮಾನ್ಯ ಸದಸ್ಯರ ಕೋರಿಕೆ ಮೇರಿಗೆ ಅವರ ಕ್ಷೇತ್ರಕ್ಕೆ ಹೋಗಿದ್ದಾಗ ಪ್ರವಾಸಿ ಮಂದಿರಕ್ಕೂ ಭೇಟಿಕೊಟ್ಟಿದ್ದು, ಕೊಠಡಿಗಳ ನಿರ್ಮಾಣ ಕೈಗೊಳ್ಳುವಂತೆ ಆದೇಶಿಸಿದ್ದೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಬ್ರಿಟಿಷರ ಕಾಲದಲ್ಲಿ ಬೀರೂರು ಮತ್ತು ಕಡೂರಿನಲ್ಲಿ ಪ್ರವಾಸಿ ಮಂದಿರಗಳನ್ನು ಕಟ್ಟಲಾಗಿದ್ದು, ಬೀರೂರು ಕ್ಷೇತ್ರದ ಶಾಸಕರು ಆಗಲೇ ತಿಳಿಸಿದಂತೆ ಸದರಿ ಪ್ರವಾಸಿ ಮಂದಿರ ತಿಪಟೂರು-ಹೊನ್ನಾವರ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿದೆ. ಅದೇ ರೀತಿ ಕಡೂರು ತಾಲ್ಲೂಕು ಕೇಂದ್ರವಾಗಿದ್ದರೂ ಅಲ್ಲಿನ ಪ್ರವಾಸಿ ಮಂದಿರದಲ್ಲಿ ನಾಲ್ಕು ಕೊಠಡಿಗಳಿದ್ದರೆ ಬೀರೂರಿನ ಪ್ರವಾಸಿ ಮಂದಿರದಲ್ಲಿ ಮೂರು ಕೊಠಡಿಗಳಿವೆ. ಮಾನ್ಯ ಲೋಕೋಪಯೋಗಿ ಸಚಿವರು ಕಡೂರು ಹಾಗೂ ಬೀರೂರು ಪ್ರವಾಸಿ ಮಂದಿರಗಳಲ್ಲಿ ಒಂದೊಂದು ದಿವಸ ವಾಸ್ತವ್ಯ ಹೂಡಿದರೆ ಅವರಿಗೆ ಅಲ್ಲಿನ ಕೊಠಡಿಗಳ ಬಗ್ಗೆ ಅನುಭವವುಂಟಾಗಿ ಆಗಲಾದರೂ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಕಾರ್ಯಪ್ರವೃತ್ತರಾಗುತ್ತಾರೆಂದು ಅವರು ಸಚಿವರಾದ ನಂತರ ಎರಡು ವರ್ಷಗಳಿಂದಲೂ ನಮ್ಮ ಕ್ಷೇತ್ರಕ್ಕೆ ಬರಬೇಕೆಂದು ಕರೆಯುತ್ತಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ಬೀರೂರು ಮಲೆನಾಡಿನ ಹೆಬ್ಬಾಗಿಲುಗಳು. ಯಾತ್ರಾರ್ಥಿಗಳಾಗಲೀ, ಪ್ರವಾಸಿಗರಾಗಲೀ ಯಾರೇ ಬಂದರೂ ಕಡೂರು ಹಾಗೂ ಬೀರೂರಿನ ಮೂಲಕವೇ ಚಿಕ್ಕಮಗಳೂರು ಜಿಲ್ಲೆಯ ಇತರ ಭಾಗಗಳಿಗೆ ಹೋಗಬೇಕಾಗಿರುತ್ತದೆ. ಆದುದರಿಂದ, ಕಡೂರಿನಲ್ಲಿ ಸುಸಜ್ಜಿತವಾದ ಪ್ರವಾಸ ಮಂದಿರವೊಂದನ್ನು ನಿರ್ಮಿಸಿಕೊಡಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಸಾರಿಗೆ ಸಚಿವರಾದ ಸಗೀರ್ ಅಹಮದ್‌ರವರು ಸ್ವತಃ ಅಲ್ಲಿಗೆ ಹೋಗಿ ಪ್ರವಾಸಿ ಮಂದಿರದ ನೂತನ ಕಟ್ಟಡವನ್ನು ಉದ್ಘಾಟನೆ ಮಾಡಿರುವುದಾಗಿ ಹೇಳುತ್ತಿದ್ದಾರೆ. ಅದರೂ ಕೂಡ ಒಟ್ಟಾರೆ ರಾಜ್ಯದಲ್ಲಿರುವ ಪ್ರವಾಸಿ ಮಂದಿರಗಳಲ್ಲಿ ಕೊಠಡಿಗಳ ಕೊರತೆಯಿದ್ದು, ಕೊಠಡಿಗಳನ್ನು ಸರಿಯಾದ ರೀತಿಯಲ್ಲಿ

ನಿರ್ವಹಿಸಬೇಕಾದರೆ ಹೆಚ್ಚು ಹಣಕಾಸಿನ ಅವಶ್ಯಕತೆಯಿರುವುದರಿಂದ ಆಯವ್ಯಯದಲ್ಲಿ ಇದಕ್ಕಾಗಿ ಐದು ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಸಚಿವರು ಪ್ರವಾಸಿ ಮಂದಿರ ಕಟ್ಟಡದ ಪ್ರಾರಂಭೋತ್ಸವವನ್ನು ಮಾಡಿಲ್ಲ. ಅವರು ಅದೇಕೆ ಆ ರೀತಿ ಹೇಳುತ್ತಿದ್ದಾರೋ ಗೊತ್ತಿಲ್ಲ. ಜಿಲ್ಲಾ ಮಂತ್ರಿಗಳಾಗಿ ಜವಾಬ್ದಾರಿ ಸ್ಥಾನದಲ್ಲಿರುವವರು ಸದರಿ ಕಟ್ಟಡದ ಪ್ರಾರಂಭೋತ್ಸವ ಮಾಡಿದ್ದೇವೆಂದು ವಿಧಾನಸಭೆಯಲ್ಲಿ ಹೇಳಿದರೆ ಅದು ಎಷ್ಟು ಪ್ರಸ್ತುತ ಎಂದು ಕೇಳಬೇಕಾಗುತ್ತದೆ.

ವಕ್ಫ್ ಬೋರ್ಡ್‌ನಿಂದ ಸಹಾಯ.

179 (2121)

ಶ್ರೀ ರಾಜುಗೌಡ.ಜಿ.(ಹನ್ನೂರು): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನೇಕ ವರ್ಷಗಳಿಂದ ವಕ್ಫ್ ಸಂಬಂಧಪಟ್ಟಂತೆ ಆಸ್ತಿಪಾಸ್ತಿಗಳ ಸಮೀಕ್ಷೆ ಮಾಡದಿರಲು ಕಾರಣವೇನು?

ಆ) ವಕ್ಫ್ ಬೋರ್ಡ್‌ವತಿಯಿಂದ ಯಾರು ಯಾರಿಗೆ ಯಾವ ಯಾವ ರೀತಿ ಸಹಾಯ ಸಿಗುತ್ತಿದೆ?

ಇ) ಇದುವರೆವಿಗೆ ಯಾವ ಯಾವ ಸೌಲಭ್ಯಕ್ಕಾಗಿ ವೆಚ್ಚ ಮಾಡಲಾಗಿರುವ ಹಣವೆಷ್ಟು?

ಶ್ರೀ ಎ.ಎಂ.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಅ) ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ವಕ್ಫ್ ಸಂಸ್ಥೆಗಳ 2ನೇ ಸಮೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗಿದ್ದು, ಇದನ್ನು ಮೊದಲನೆ ಹಂತದಲ್ಲಿ ಬಿಜಾಪುರ, ಗುಲ್ಬರ್ಗಾ ಬೆಂಗಳೂರು(ನಗರ) ಹಾಗೂ ಬೆಂಗಳೂರು(ಗ್ರಾಮಾಂತರ) ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ ಮತ್ತು ತದನಂತರ ಉಳಿದ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು.

ಆ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ವಕ್ಫ್ ಕಾಯಿದೆ 1954ನಡಿ ರಚಿಸಲಾದ ಒಂದು ಸ್ವಾಯತ್ತ ಸಂಸ್ಥೆಯಾಗಿದೆ. ಇದನ್ನು ಮುಖ್ಯವಾಗಿ ವಕ್ಫ್ ಸಂಸ್ಥೆಗಳು ಹಾಗೂ ಅವುಗಳ ಆಸ್ತಿಗಳ ರಕ್ಷಣೆ, ನಿಯಂತ್ರಣ, ನಿರ್ವಹಣೆ ಹಾಗೂ ಆಡಳಿತಕ್ಕಾಗಿ ಮತ್ತು